# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1101 |
| ಸದಸ್ಯರ ಹೆಸರು | ಶ್ರೀಮತಿ ಹೇಮಲತಾ ನಾಯಕ್ |
| ಉತ್ತರಿಸುವ ದಿನಾಂಕ | 18-12-2024 |
| ಉತ್ತರಿಸುವವರು | ಸಾರಿಗೆ ಮತ್ತು ಮುಜರಾಯಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕದಲ್ಲಿ ಮುಜರಾಯಿ ಇಲಾಖೆ ಅಧೀನದಲ್ಲಿರುವ ಒಟ್ಟು ದೇವಾಲಯಗಳೆಷ್ಟು; ಅದರಲ್ಲಿ ಎ, ಬಿ, ಸಿ ವರ್ಗದಲ್ಲಿರುವ ದೇವಸ್ಥಾನಗಳ ಒಟ್ಟು ಸಂಖ್ಯೆ ಎಷ್ಟು; | ರಾಜ್ಯದಲ್ಲಿ ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೊಳಪಡುವ ದೇವಾಲಯಗಳ ಸಂಖ್ಯೆ:34,564<br>ಪ್ರವರ್ಗವಾರು ವಿವರ ಕೆಳಕಂಡಂತಿರುತ್ತದೆ.<br><br>**ಪ್ರವರ್ಗ "ಎ"**: 205<br>**ಪ್ರವರ್ಗ "ಬಿ"**: 193<br>**ಪ್ರವರ್ಗ "ಸಿ"**: 34,166 |
| ಆ) | ಕಳೆದ 10 ವರ್ಷಗಳಲ್ಲಿ ಯಾವ್ಯಾವ ದೇವಾಲಯಗಳನ್ನು ಸರ್ಕಾರದ ವಶಕ್ಕೆ ಪಡೆಯಲಾಗಿದೆ; ಯಾವ್ಯಾವ ದೇವಾಲಯಗಳನ್ನು ಸರ್ಕಾರದ ವಶದಿಂದ ಬಿಡುಗಡೆ ಮಾಡಲಾಗಿದೆ: | ಕಳೆದ ಹತ್ತು ವರ್ಷಗಳಲ್ಲಿ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ **1997ರ ಕಲಂ 42 ಮತ್ತು 43ರನ್ವಯ** ಒಟ್ಟು 17 ದೇವಾಲಯಗಳನ್ನು ಘೋಷಿತ ಸಂಸ್ಥೆಯೆಂದು ಘೋಷಿಸಿ ಸರ್ಕಾರದ ವಶಕ್ಕೆ ಪಡೆಯಲಾಗಿರುತ್ತದೆ.<br><br>ಸದರಿ 17 ದೇವಾಲಯಗಳ ಪೈಕಿ 05 ದೇವಾಲಯಗಳನ್ನು ನ್ಯಾಯಾಲಯದ ತೀರ್ಪಿನನ್ವಯ ಸರ್ಕಾರದ ವಶದಿಂದ ಕೈಬಿಡಲಾಗಿರುತ್ತದೆ.<br><br>ವಿವರವನ್ನು **ಅನುಬಂಧ**ದಲ್ಲಿ ಒದಗಿಸಿದೆ. |
| ಇ) | ಈಗ ಮುಜರಾಯಿ ಇಲಾಖೆ ನಡೆಯುತ್ತಿರುವುದು ಯಾವ ಕಾಯ್ದೆ ಆಧಾರದಲ್ಲಿ; ಈ ಕಾಯ್ದೆಯು ಈಗಾಗಲೇ ಎರಡು ಬಾರಿ ನ್ಯಾಯಾಲಯದಿಂದ ರದ್ದು ಮಾಡಲ್ಪಟ್ಟಿದ್ದು ಎನ್ನುವುದು ಸರ್ಕಾರಕ್ಕೆ ತಿಳಿದಿದೆಯೇ; ಹಾಗೆ ರದ್ದಾಗಿದ್ದರೆ ಕಾರಣ ಏನು; ಈ ಕುರಿತು ಪ್ರಕರಣ ನ್ಯಾಯಾಲಯದಲ್ಲಿ ಯಾವ ಹಂತದಲ್ಲಿದೆ: | ಧಾರ್ಮಿಕ ದತ್ತಿ ಇಲಾಖೆಯು ಪ್ರಸ್ತುತ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ-1997 ಮತ್ತು ತಿದ್ದುಪಡಿ ಕಾಯ್ದೆ 2011 ಮತ್ತು 2ನೇ ತಿದ್ದುಪಡಿ ಕಾಯ್ದೆ 2012ರ ಕಾಯ್ದೆಗಳು ಮತ್ತು ಸದರಿ ಕಾಯ್ದೆಗಳಿಗೆ ಅನುಗುಣವಾಗಿ ರೂಪಿಸಿರುವ ನಿಯಮಗಳ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ.<br><br>ಸದರಿ ಕಾಯ್ದೆಯ ಸಿಂಧುತ್ವವನ್ನು ಪ್ರಶ್ನಿಸಿ, ಹಲವಾರು ದೇವಾಲಯಗಳ ಪ್ರತಿನಿಧಿಗಳು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂ: 31937/2003 ಹಾಗೂ ಇತರೆ ರಿಟ್ ಅರ್ಜಿಗಳನ್ನು ದಾಖಲ್ಮಾಡಿದ್ದು, ಎಲ್ಲಾ ರಿಟ್ ಅರ್ಜಿಗಳನ್ನು ಒಟ್ಟುಗೂಡಿಸಿ ದಿನಾಂಕ:09.09.2005 ರಂದು ನೀಡಿರುವ ತೀರ್ಪಿನಲ್ಲಿ ರಿಟ್ ಅರ್ಜಿಗಳನ್ನು ವಜಾಗೊಳಿಸಿ ಕಾಯ್ದೆಯ ಸಿಂಧುತ್ವವನ್ನು ಎತ್ತಿ ಹಿಡಿದಿರುತ್ತದೆ.<br><br>ಮಾನ್ಯ ಉಚ್ಚ ನ್ಯಾಯಾಲಯದ ದಿನಾಂಕ:09.09.2005ರ ತೀರ್ಪಿನ ವಿರುದ್ಧ ವಿಭಾಗೀಯ ಪೀಠದಲ್ಲಿ ಹಲವು ದೇವಾಲಯಗಳ ಪ್ರತಿನಿಧಿಗಳು ರಿಟ್ ಅಪೀಲು ಸಂ: 3440/2005 |

| ಪ್ರಶ್ನೆ | ಉತ್ತರ |
|---|---|
| | ಹಾಗೂ ಇತರೆ ರಿಟ್ ಅಪೀಲುಗಳನ್ನು ದಾಖಲಿಸಿದ್ದು, ಸದರಿ ಅಪೀಲುಗಳನ್ನು ಒಟ್ಟುಗೂಡಿಸಿ ದಿನಾಂಕ:08.09.2006 ರಂದು ನೀಡಿರುವ ತೀರ್ಪಿನಲ್ಲಿ ರಿಟ್ ಅಪೀಲುಗಳನ್ನು ಪುರಸ್ಕರಿಸಿ, ಕಾಯ್ದೆಯು Article 14 (Right Equality) ಮತ್ತು 26 (Right to Religious Freedom) ಉಲ್ಲಂಘನೆ ಮಾಡಿದ್ದು, ಕಾಯ್ದೆಯನ್ನು ಅಸಂವಿಧಾನಿಕವೆಂದು ರದ್ದುಪಡಿಸಿರುತ್ತದೆ ಹಾಗೂ ಕಾಯ್ದೆಯನ್ನು ಹೊಸದಾಗಿ ಜಾರಿಗೆ ತರುವ ಸ್ವಾತಂತ್ರ್ಯವನ್ನು ಸರ್ಕಾರಕ್ಕೆ ನೀಡಿರುತ್ತದೆ.<br><br>ಸರ್ಕಾರವು ಮಾನ್ಯ ಉಚ್ಚ ನ್ಯಾಯಾಲಯದ ದಿನಾಂಕ:08.09.2006ರ ತೀರ್ಪನ್ನು ಪ್ರಶ್ನಿಸಿ, ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಎಸ್. ಎಲ್. ಪಿ. ಸಂಖ್ಯೆ: 5398/2007 ಅನ್ನು (ಸದರಿ ಪ್ರಕರಣವು ನಂತರದಲ್ಲಿ ಸಿವಿಲ್ ಅಪೀಲು ಸಂ: 5924/2008 ಎಂದು ಪರಿವರ್ತಿತವಾಗಿದೆ) ದಾಖಲಿಸಿದ್ದು, ಸದರಿ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ;02.04.2007 ರಂದು ಮಾನ್ಯ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದ ದಿನಾಂಕ:08.09.2006ರ ತೀರ್ಪಿಗೆ ತಡೆಯಾಜ್ಞೆ ನೀಡಿರುತ್ತದೆ.<br><br>ಸರ್ಕಾರವು ದಿನಾಂಕ:20.01.2007ರ ಆದೇಶದನ್ವಯ ಕಾಯ್ದೆಗೆ ಸೂಕ್ತ ತಿದ್ದುಪಡಿಗಳನ್ನು ತರುವ ಸಲುವಾಗಿ ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ರಾಮಾಜೋಯಿಸ್ ರವರ ಅಧ್ಯಕ್ಷತೆಯಲ್ಲಿ ರಚಿಸಿದ ಉನ್ನತ ಮಟ್ಟದ ಸಮಿತಿಯು ದಿನಾಂಕ;13.09.2007 ರಂದು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತದೆ.<br><br>ಸರ್ಕಾರವು ಉನ್ನತ ಮಟ್ಟದ ಸಮಿತಿಯ ಶಿಫಾರಸ್ಸುಗಳನ್ನು ಪರಿಗಣಿಸಿ, ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ತಿದ್ದುಪಡಿ ಅಧಿನಿಯಮ 2011 ಅನ್ನು ದಿನಾಂಕ:04.05.2011 ರಿಂದ ಅನ್ವಯವಾಗುವಂತೆ ಜಾರಿಗೆ ತಂದಿರುತ್ತದೆ ಹಾಗೂ ತಿದ್ದುಪಡಿ ಕಾಯ್ದೆಗೆ ಅನುಗುಣವಾಗಿ ನಿಯಮಾವಳಿಗಳನ್ನು ದಿನಾಂಕ:27.01.2012 ರಿಂದ ಅನ್ವಯವಾಗುವಂತೆ ಜಾರಿಗೆ ತಂದಿರುತ್ತದೆ.<br><br>ತಿದ್ದುಪಡಿ ಅಧಿನಿಯಮ 2011ರ ಸಿಂಧುತ್ವವನ್ನು ಪ್ರಶ್ನಿಸಿ, ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಹಲವು ರಿಟ್ ಅರ್ಜಿಗಳು ದಾಖಲಾಗಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ಸದರಿ ರಿಟ್ ಅರ್ಜಿಗಳನ್ನು (ರಿಟ್ ಅರ್ಜಿ ಸಂ:65648-65680/2011, 64805-868/2011 ಹಾಗೂ ಇತರ ರಿಟ್ ಅರ್ಜಿಗಳು) ಒಟ್ಟುಗೂಡಿಸಿ ದಿನಾಂಕ:17.11.2015 ರಂದು ಇತ್ಯರ್ಥಪಡಿಸಿ ನೀಡಿರುವ ತೀರ್ಪಿನಲ್ಲಿ ಸದರಿ ರಿಟ್ ಅರ್ಜಿಗಳನ್ನು ಪುರಸ್ಕರಿಸಿ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ತಿದ್ದುಪಡಿ ಅಧಿನಿಯಮ 2011 ಹಾಗೂ 2ನೇ ತಿದ್ದುಪಡಿ ಅಧಿನಿಯಮ 2012 ಅನ್ನು ರದ್ದುಪಡಿಸಿರುತ್ತದೆ. |

| ಪ್ರಶ್ನೆ | | ಉತ್ತರ |
|---|---|---|
| | | ಮಾನ್ಯ ಉಚ್ಚ ನ್ಯಾಯಾಲಯದ ದಿನಾಂಕ:17.11.2015 ರ ತೀರ್ಪಿನ ವಿರುದ್ಧ ರಾಜ್ಯ ಸರ್ಕಾರವು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಕರಣ ಎಸ್.ಎಲ್.ಪಿ. ಸಂಖ್ಯೆ:6834-6959/2016 ಪ್ರಕರಣವನ್ನು ದಾಖಲ್ಮಾಡಲಾಗಿರುತ್ತದೆ. ಸದರಿ ಎಸ್.ಎಲ್.ಪಿ. ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ:18.04.2016 ರಂದು ನೀಡಿರುವ ಮಧ್ಯಂತರ ಆದೇಶದಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ದಿನಾಂಕ:17.11.2015ರ ತೀರ್ಪಿಗೆ ತಡೆಯಾಜ್ಞೆ ನೀಡಿರುತ್ತದೆ.<br><br>ಈ ಎರಡೂ ಪ್ರಕರಣಗಳು ಪ್ರಸ್ತುತ **ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದೆ ವಿಚಾರಣೆ ಹಂತದಲ್ಲಿದ್ದು, ಪ್ರಕರಣವು ಇತ್ಯರ್ಥಕ್ಕೆ ಬಾಕಿ ಇರುತ್ತದೆ.** |
| ಈ) | ಹೊಸ ಕಾಯ್ದೆ ರಚಿಸಲು ಸರ್ಕಾರ ಆಲೋಚನೆ ಮಾಡುತ್ತಿದೆಯೇ; ಹಾಗಿದ್ದರೆ ಯಾವ ಹಂತದಲ್ಲಿದೆ? | ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ, 1997 ಹಾಗೂ ನಿಯಮ-2002 ಅನ್ನು ಪುನರ್ ವಿಮರ್ಶಿಸಿ ಅಗತ್ಯವಿರುವ ತಿದ್ದುಪಡಿಗಳನ್ನು ಮಾಡುವ ಕುರಿತು ಸಲಹೆಗಳನ್ನು ನೀಡಲು ಆಯುಕ್ತರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿರುತ್ತದೆ.<br><br>ಅದರಂತೆ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ, 1997 ಹಾಗೂ ನಿಯಮ-2002 ಅನ್ನು ಪುನರ್ ವಿಮರ್ಶಿಸಿ ಅಗತ್ಯವಿರುವ ತಿದ್ದುಪಡಿಗಳನ್ನು ಮಾಡುವ ಕುರಿತು ಸಲಹೆಗಳನ್ನು ನೀಡಲು ಪ್ರಥಮ ಸಭೆಯನ್ನು ನಡೆಸಲಾಗಿರುತ್ತದೆ. |

ಸಂಖ್ಯೆ: ಕಂಇ 181 ಮುಸಪ್ರ 2024

**(ರಾಮಲಿಂಗಾರೆಡ್ಡಿ)**
**ಸಾರಿಗೆ ಮತ್ತು ಮುಜರಾಯಿ ಸಚಿವರು**